ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ರವರು "ಕೋಣಚಪಲ್ಲಿ ಮರಳು ಬ್ಲಾಕ್" ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣ ನದಿ ತೀರದ ಎದುರಿನ ಸರ್ವೆ.ನಂ: 39 ರಿಂದ 44 & 57, ಕೊಣಚಪಲ್ಲಿ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಒಟ್ಟು 50.00 ಎಕರೆ (20.23 ಹೆಕ್ಟರ್) ಪ್ರದೇಶದಲ್ಲಿ ವಾರ್ಷಿಕ 2,08,818 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಅರೆ ಯಾಂತ್ರಿಕೃತ ಪದ್ದತಿಯ (Semi-Mechanised Method) ಪ್ರಕಾರ ಮಾಡಲು ಉದ್ದೇಶಿಸಿರುತ್ತಾರೆ. ಈ ಪ್ರಯುಕ್ತ ಉದ್ದೇಶಿತ ಯೋಜನೆಯ ಕುರಿತು ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

RECEIVED
26 JUL 2022
KSPCB, Bangalore

ದಿನಾಂಕ: 14.06.2022.

ಸಮಯ: ಸಾಯಂಕಾಲ 5.00 ಘಂಟೆ.

ಸ್ಥಳ: ಕರ್ಕಿಹಳ್ಳಿ, PWD ದಾಸ್ತಾನು ಕೇಂದ್ರದ ಹತ್ತಿರ

ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ರವರು "ಕೋಣಚಪಲ್ಲಿ ಮರಳು ಬ್ಲಾಕ್" ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣ ನದಿ ತೀರದ ಎದುರಿನ ಸರ್ವೆ.ನಂ: 39 ರಿಂದ 44 & 57, ಕೊಣಚಪಲ್ಲಿ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಒಟ್ಟು 50.00 ಎಕರೆ (20.23 ಹೆಕ್ಟರ್) ಪ್ರದೇಶದಲ್ಲಿ ವಾರ್ಷಿಕ 2,08,818 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಅರೆ ಯಾಂತ್ರಿಕೃತ ಪದ್ದತಿಯ (Semi-Mechanised Method) ಪ್ರಕಾರ ನಡೆಸಲು ಉದ್ದೇಶಿಸಿರುತ್ತಾರೆ. ಈ ಕುರಿತು ದಿನಾಂಕ: 14.06.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಕರ್ಕಿಹಳ್ಳಿ, PWD ದಾಸ್ತಾನು ಕೇಂದ್ರದ ಹತ್ತಿರ, ಕರ್ಕಿಹಳ್ಳಿ, ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ-1 |
| ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | ಅನುಬಂಧ-5 |

ಕೇಂದ್ರ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ : 14.09.2006 (ತಿದ್ದುಪಡಿ ದಿನಾಂಕ : 01.12.2009) ರಂದು ಹೊರಡಿಸಿದ ಅಧಿಸೂಚನೆಯ ಪ್ರಕಾರ ಮೇಲಿನ ಉದ್ದೇಶಿತ ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಬೆಂಗಳೂರು ಇವರಿಂದ ಈ ಅಧಿಸೂಚನೆಯ ಪ್ರಕಾರ, ಪರಿಸರ ಸಾರ್ವಜನಿಕ ಆಲುಕೆ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ. ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರು ಮೇಲಿನ ಯೋಜನೆಗೆ Terms Of

Reference ಅನ್ನು ದಿನಾಂಕ: 06.12.2021 ರಂದು ಅಂತಿಮಗೊಳಿಸಿ ನೀಡಿದ್ದು, ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರುವಂತೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಹಟ್ಟಿ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರಿಗೆ ತಿಳಿಸಿರುತ್ತಾರೆ. ಸದರಿ ಕಂಪನಿಯವರು ತಮ್ಮ ಪತ್ರ ದಿನಾಂಕ: 02.02.2022 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರಿರುತ್ತಾರೆ. ಈ ಕೋರಿಕೆ ಮೇರೆಗೆ, ಮಾನ್ಯ ಜಿಲ್ಲಾಧಿಕಾರಿಗಳ ಒಪ್ಪಿಗೆ ಮತ್ತು ದಿನಾಂಕ ನಿಗದಿಪಡಿಸಲಾಯಿತು.

ಮೇಲಿನ ಅಧಿಸೂಚನೆ ಅನ್ವಯ ಯೋಜನೆದಾರರು ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಸಮಯ ನೀಡಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ **"ಕನ್ನಡ ಪ್ರಭ" (ಕನ್ನಡ), "ದಿ ಹಿಂದೂ" (ಆಂಗ್ಲ) ಭಾಷೆಯಲ್ಲಿ ದಿನಾಂಕ: 14.05.2022 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ಸುದ್ದಿಮೂಲ" ದಿನ ಪತ್ರಕೆಯಲ್ಲಿ ದಿನಾಂಕ: 21.05.2022** ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಮುಂದುವರೆದು, ಯೋಜನಾ ಸ್ಥಳದಲ್ಲಿ ವಾಸವಾಗಿರುವ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ಬಾದಿತರಾಗುವ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಸಲ್ಲಿಸುವಂತೆ ಸದರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಮೇಲಿನ ಪ್ರಕಟಣೆಯಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮೇಲೆ ನಿಗದಿಪಡಿಸಿದ ಸ್ಥಳದಲ್ಲಿ ದಿನಾಂಕ: 14.06.2022 ರಂದು ಸಾಯಂಕಾಲ 5.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಆರಂಭದಲ್ಲಿ, ಶ್ರೀ. ರಾಘವ, ಮ್ಯಾನೇಜರ್, ಮೆಃ ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿ, ಇವರು ಶ್ರೀ. ದುರಗೇಶ್, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಮತ್ತು ಎಂ. ಎಸ್. ನಟೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ರಾಯಚೂರು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ಸಭೆಯಲ್ಲಿ ಉಪಸ್ಥಿತರಿಂದ ಗ್ರಾಮಸ್ಥರಿಗೆ, ಸಾರ್ವಜನಿಕರಿಗೆ ಮತ್ತು ಮಾಧ್ಯಮದವರಿಗೆ ಸ್ವಾಗತವನ್ನು ಕೋರಿದರು ಮತ್ತು ಯೋಜನೆಯ ಬಗ್ಗೆ ವಿವರಣೆಯನ್ನು ನೀಡಿದರು.

ಮುಂದುವರೆದು, ಶ್ರೀಮತಿ. ಇಂಪಾ, EIA ಸಲಹೆಗಾರರು, ಹುಬರ್ಟ್ ಎನ್ವಿರೋ ಕೇರ್ ಸಿಸ್ಟಮ್ಸ್ (ಪಿ) ಲಿಮಿಟೆಡ್, ಚೆನ್ನೈ, ಇವರು ಯೋಜನೆಯ ಪರಿಸರ ಅಧ್ಯಯನ ವರದಿಯ ಪಾತ್ರಕ್ಷೆತೆಯನ್ನು ಪ್ರಚುರಪಡಿಸಿದರು.

ಅಪರ ಜಿಲ್ಲಾಧಿಕಾರಿಗಳು ಸಭೆ ಬಗ್ಗೆ ಸಾರ್ವಜನಿಕರಿಗೆ ವಿವರ ನೀಡಿ ಅಹವಾಲುಗಳನ್ನು ಲಿಖಿತವಾಗಿ ಅಥವಾ ಖುದ್ದು ಸಭೆ ಮುಂದೆ ಮಂಡಿಸಲು ಸೂಚಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಸ್ಥಳೀಯ ಗ್ರಾಮಸ್ಥರು ಈ ಕೆಳಕಂಡ ಅಹವಾಲುಗಳನ್ನು ಮಂಡಿಸಿದರು.

**1. ಶ್ರೀ. ಸಂಗನಗೌಡ ಅಣೆಯಾರ್, ಕೋಣಚಪಲ್ಲಿ ಗ್ರಾಮ :-**

ಕೋಣಚಪಲ್ಲಿ ಮರಳು ಬ್ಲಾಕ್ (ಬ್ಲಾಕ್ ನಂ-1), ಕೋಣಚಪಲ್ಲಿ ಗ್ರಾಮಕ್ಕೆ ಸರಿಯಾದ ರಸ್ತೆ ವ್ಯವಸ್ಥೆ ಇರುವುದಿಲ್ಲ ಆದ್ದರಿಂದ ಸರಿಯಾದ ರಸ್ತೆ ವ್ಯವಸ್ಥೆ ಕಲ್ಪಿಸಿ, ಮರಳು ಗಣಿಗಾರಿಕೆ ಮಾಡಬಹುದು ಎಂದು ತಿಳಿಸಿದರು.

**2. ಶ್ರೀ. ವೆಂಕಟೇಶ್, ಕರ್ಕಿಹಳ್ಳಿ ಗ್ರಾಮ :-**

ಕರ್ಕಿಹಳ್ಳಿ ಗ್ರಾಮವು ಕೃಷ್ಣಾ ನದಿ ಪ್ರವಾಹದಿಂದ ಭಾದಿತವಾಗಿ ಸ್ಥಳಾಂತರಿಸಿದ ಗ್ರಾಮವಾಗಿದ್ದು, ಇಲ್ಲಿ ದನ-ಕರು ಮೇಯಿಸಲು ಸಹ ಜಾಗವಿರುವುದಿಲ್ಲ ಮತ್ತು ಇತರೇ ಮೂಲ ಸೌಲಭ್ಯಗಳಾದ ರಸ್ತೆ, ಶೌಚಾಲಯಗಳನ್ನು ಶೀಘ್ರವಾಗಿ ಕಲ್ಪಿಸಬೇಕೆಂದು ಆಗ್ರಹಿಸಿದರು.

**3. ಶ್ರೀ. ಬಸವರಾಜ್, ಕರ್ಕಿಹಳ್ಳಿ ಗ್ರಾಮ :-**

ಇವರು ತಮ್ಮ ಅಹವಾಲು ಮಂಡಿಸುತ್ತಾ, ತಮ್ಮ ಗ್ರಾಮಕ್ಕೆ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಿಸಬೇಕು, ಊರಿನ ದನ-ಕರುಗಳಿಗೆ ಮೇವಿಗಾಗಿ ಭೂಮಿ ಮೀಸಲು ಇಡಬೇಕು ಮತ್ತು ಸ್ಟಾಕ್‌ಯಾರ್ಡ್ ಸುತ್ತ ಗಿಡ-ಮರಗಳನ್ನು ಬೆಳೆಸಬೇಕೆಂದು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

ಮಾನ್ಯ ಜಿಲ್ಲಾಧಿಕಾರಿಗಳಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ.

14/06/2022

ಅಪರ ಜಿಲ್ಲಾಧಿಕಾರಿಗಳು ಮತ್ತು
ಜಿಲ್ಲಾ ದಂಡಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ ಆಲಿಕೆ ಸಭೆ
ಅಧ್ಯಕ್ಷರು, ರಾಯಚೂರು